**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ71/2023</u> ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **12.09.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ. **ಕೆ.ಕೆ.ಎನ್** ವಕೀಲರಿಂದಃ</u>

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಪ್ರಮಾಣ ಪತ್ರವನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನಾನು ದಿನಾಂಕ **18.11.2019** ರ ನೋಂದಾಯಿತ ಕ್ರಯಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**1** ಎಂದು, **1** ಪಹಣಿ ಪತ್ರಿಕೆಯನ್ನು ನಿಪಿ-**2** ಎಂದು, **2** ಋಣಭಾರ ರಾಹಿತ್ಯ ಪತ್ರಗಳನ್ನು ನಿಪಿ-**3** ಮತ್ತು **4** ಎಂದು, **1** ಮುಟೇಷನ ಆದೇಶವನ್ನು ನಿಪಿ-**5** ಎಂದು, **1** ಪಟ್ಟಾ ಪುಸ್ತಕವನ್ನು ನಿಪಿ-**6** ಎಂದು, **1** ಆಸ್ತಿ ತೆರಿಗೆ ಪಾವತಿ ರಸೀದಿಯನ್ನು ನಿಪಿ-**7** ಎಂದು, ಆಕಾರಬಂದ್ ನ ದೃಡೀಕೃತ ನಕಲನ್ನು ನಿಪಿ-**8** ಎಂದು, ಹಿಸ್ಸಾ ಸರ್ವೇ ದಾಖಲೆಯ ದೃಡೀಕೃತ ನಕಲನ್ನು ನಿಪಿ-**9** ಎಂದು, **1** ಸ್ವೀಕೃತಿ ರಸೀದಿಯನ್ನು ನಿಪಿ-**10** ಎಂದು, **1** ಹಿಂಬರಹವನ್ನು ನಿಪಿ-**11** ಎಂದು, **2** ಫೋಟೋಗಳನ್ನು ನಿಪಿ-**12** ಮತ್ತು **13** ಎಂದು, **1** ಡಿವಿಡಿಯನ್ನು ನಿಪಿ-**14** ಎಂದು ಗುರುತಿಸಲಾಯಿತು.

<u>**ಪಾಟಿ ಸವಾಲುಃ** ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**